ಶ್ರೀ ಪಿ. ರತ್ನಾಕರ್.—ಮಾನ್ಯ ಅಧ್ಯಕ್ಷರೇ, ನಾನು ಮಲೆನಾಡು ಪ್ರದೇಶದಿಂದ ಬಂದವನು. ಇದು ಬಹಳ ಗಂಭೀರವಾದಂಥ ಪ್ರಶ್ನೆ. ನಮ್ಮ ಮಲೆನಾಡು ಪ್ರದೇಶದಲ್ಲಿ ಇದು ಒಂದು ದೊಡ್ಡ ಸಮಸ್ಯೆಯಾಗಿದೆ. ಬಡವರು ಎರಡು ಎಕರೆಗಳನ್ನು ಅತಿಕ್ರಮಣ ಮಾಡಿಕೊಂಡಿದ್ದರೆ ಆ ಜಮೀನಿನ ಪಕ್ಕದಲ್ಲಿಯೇ ಫಾರೆಸ್ಟ್ ಇಲಾಖೆಯವರು ಅಳತೆ ಮಾಡಿ ಕಲ್ಲು ಹಾಕಿದ್ದಾರೆ ಭಾಗಾಯ್ತು ಜಮೀನಂ ಇದ್ದು ಅಲ್ಲಿ ಫಾರೆಸ್ಟ್ ಲ್ಯಾಂಡ್ ಇದ್ದಕ್ಕೆ ಅಲ್ಲಿ ಕೂಡ ಇದೇ ರೀತಿ ಮಾಡಿದ್ದಾರೆ. ಸಿ ಅಂಡ್ ಡಿ ಲ್ಯಾಂಡ್‌ನಲ್ಲಿ ಮನೆ ಕಟ್ಟಿಕೊಂಡಿದ್ದರೆ ಅಲ್ಲಿಕೂಡ ಇದೇ ರೀತಿ ಮಾಡಿದ್ದಾರೆ. ಆದ್ದರಿಂದ ಇಂತಹ ಕಡೆಗಳಲ್ಲಿ ಹೆಚ್ಚು ಜಾಗವನ್ನು ಬಿಟ್ಟುಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಕನಸಗೇರಿ ಏತ ನೀರಾವರಿ ಯೋಜನೆ

೨೨೯. ಶ್ರೀ ಎಂ. ಎಲ್, ಮುತ್ತಣ್ಣನವರ್ (ಗೋಕಾಕ್).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಾರ್ಕಂಡೇಯ ಯೋಜನೆಯ ಸರ್ವೇ ಕೆಲಸ ಮುಗಿದಿದೆಯೇ,

ಆ) ಹಾಗಿದ್ದಲ್ಲಿ ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು ?

ಇ) ವಿಶ್ವಬ್ಯಾಂಕ್ ನೆರವಿನಿಂದ ಈ ಯೋಜನೆ ಕೈಗೊಳ್ಳಲು ಸರ್ಕಾರದವರು ತೀರ್ಮಾನಿಸಿದ್ದಾರೆಯೇ ?

ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಮಂತ್ರಿ ಮತ್ತು ನೀರಾವರಿ ಮಂತ್ರಿಗಳು).—

ಅ) ಇಲ್ಲ.

ಆ) ಈ ಯೋಜನೆಗೆ ಕೇಂದ್ರ ಜಲ ಆಯೋಗದ ಸಹಮತಿ ಪಡೆದಮೇಲೆ ದೊರಕುವ ಸಂಪನ್ಮೂಲಗಳ ಆಧಾರದ ಮೇಲೆ ಕೆಲಸವನ್ನು ತೆಗೆದುಕೊಳ್ಳಲು ಯೋಜಿಸಿದೆ.

ಇ) ಇಲ್ಲ.

ಆ ಕಾಲದಲ್ಲಿ ಇದನ್ನು ಹ್ಯಾಂಡ್ ಓವರ್ ಮಾಡಿದ್ದಾರೆ. ಅರಣ್ಯ ಇಲಾಖೆಯಿಂದ ಸರ್ವ ಆಗಿರಲಿಲ್ಲ. ಮತ್ತು ರವಿನ್ಯೂ ಇಲಾಖೆಗೆ ಈ ಭೂಮಿಯನ್ನು ಗ್ರ್ಯಾಂಟ್ ಮಾಡಿದ್ದಾರೆ. ೧೯೭೮ನೇ ಇಸವಿಯಲ್ಲಿ ಒಂದು ನಿರ್ಣಯ ಮಾಡಿದ್ದಾರೆ. ವ್ಯವಸಾಯಗಾರರಿಗೆ ೪ ಎಕರೆ ಅತಿಕ್ರಮ ಮಾಡಿಕೊಡಬೇಕು, ಸಣ್ಣ ಹಿಡುವಳಿದಾರರಿಗೆ ೨ ಎಕರೆ ಕೊಡಬೇಕು ಎಂದು ನಿರ್ಧಾರ ಮಾಡಿದ್ದಾರೆ.

ಶ್ರೀ ಎಂ.ಎಲ್. ಮುತ್ತಣ್ಣವರ್.—ಈಗಾಗಲೇ ನಮ್ಮ ಲೋಕೋಪಯೋಗಿ ಸಚಿವರು ಹೇಳಿದಂತೆ, ಗೋಕಾಕ್, ತಾಲ್ಲೂಕು ಬರಗಾಲವನ್ನು ಎದುರಿಸುತ್ತಿದೆ. ಆದ್ದರಿಂದ ಈ ಯೋಜನೆಯನ್ನು ೧೯೮೬–೮೭ರಲ್ಲಿ ಸೇರಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಸಚಿವರು).— ಅಧ್ಯಕ್ಷರೆ, ಈ ಯೋಜನೆಯನ್ನು ೧೯೮೫–೮೬ನೇ ಬಡ್ಜೆಟ್ಟಿನಲ್ಲಿ ಸೇರಿಸಿಲ್ಲ. ೧೯೮೬–೮೭ಕ್ಕೆ ಸೇರಿಸಲು ಸಾಧ್ಯವಾಗುತ್ತದೆಯೇ ಎಂಬುದನ್ನು ಪರಿಶೀಲಿಸುತ್ತೇನೆ.

ಸಂಡೂರು ತಾಲ್ಲೂಕಿನಲ್ಲಿ ಜಲಾನಯನ ಪ್ರದೇಶಕ್ಕೆ ನೀರು ಸರಬರಾಜು

೨೩೪. ಶ್ರೀ ಯಂ. ಭೂಪತಿ (ಸಂಡೂರು).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂಡೂರು ತಾಲ್ಲೂಕು ಕಾರೇಕಂಪ್ಪ ಗ್ರಾಮದ ರೈತರು ಸುಮಾರು ೭೦೦ ಎಕರೆ ಜಲಾನಯನ ಪ್ರದೇಶಕ್ಕೆ ನೀರಿನ ಪೂರೈಕೆಗಾಗಿ ಹೋರಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಎಳು ಕ್ಯೂಸೆಕ್ಸ್ ನೀರು ಕೊಡುವ ಪ್ರಯತ್ನ ಮಾಡಲು ಸರ್ಕಾರದವರು ಉದ್ದೇಶಿಸಿರುವರೇ?